# <u>ಬಣ್ಣಿಸಲಳವೇ ನಿನ್ನ</u>

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 127.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 391.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 287.
4. **Note:** Lyrics given here are as per Ref. 1. The wordings in Ref. 2 are same as in Ref. 1 with few minor changes which are not considered here. The wordings in Ref. 3 are same as in Ref. 2. The wordings in Ref. 4 are same as in Ref. 1.

ರಾಗ: ಪೂರ್ವಿ ತಾಳ: ಅಟ

ಬಣ್ಣಿಸಲಳವೇ ನಿನ್ನ ॥ ಪ ॥

ಬಣ್ಣಿಸಲಳವಲ್ಲ ಭಕುತವತ್ಸಲ ದೇವ
ಪನ್ನಗಶಯನ ಪಾಲ್ಗಡಲೊಡೆಯನೆ ರಂಗ ॥ ಅಪ ॥

ಅಸಮ ಪರಾಕ್ರಮಿ ತಮನೆಂಬ ದೈತ್ಯನು **
ಶಶಿಧರನ ವರದಿ ಶಕ್ರಾದ್ಯರಿಗಳುಕದೆ
ಬಿಸಜಸಂಭವನ ಠಕ್ಕಿಸಿ ನಿಗಮವ ಕದ್ದು
ವಿಷಧಿಯೊಳಡಗಿರಲ್ ಒದಗಿ ಬಂದಮರರು
ವಸುಧೀಶ ಕಾಯಬೇಕೆಂದೆನಲವನ ಮ –
ರ್ದಿಸಿ ವೇದಾವಳಿಯ ತಂದು ಮೆರೆದ ದಶ -
ದಿಸೆಯೊಳು ಬೊಮ್ಮಗಂದು ವೇದವ ಕರು -
ಣಿಸದೆ ಕಂಜಾಕ್ಷ ಕೇಶವ ದಯಾಸಿಂಧು ॥ ೧ ॥ (ಮತ್ಸ್ಯಾವತಾರ)

ಇಂದ್ರಾದಿ ಸಕಲ ದೇವತೆಗಳೆಲ್ಲರು ದೈತ್ಯ
ವೃಂದವೊಂದಾಗಿ ಮತ್ಸರವ ಮರೆದು ಕೂಡಿ

ಬಂದು ನೆರೆದು ಮುರಹರ ನಿನ್ನ ಮತದಿಂದ
ಮಂದರಾದ್ರಿಯ ಕಡೆಗೋಲ ಗೈಯ್ದತುಳ ಫ
ಣೀಂದ್ರನ ತನು ನೇಣಿನಂದದಿ ಬಂಧಿಸಿ
ಸಿಂಧು ಮಥಿಸುತಿರಲು ಘನಾಚಲ -
ವಂದು ಮುಳುಗಿ ಪೋಗಲು ಬೆನ್ನಾಂತು ಮು
ಕುಂದ ನೆಗಹಿದೆ ಸುರರು ಜಯ ಜಯವೆನಲು ॥ ೨ ॥ (ಕೂರ್ಮಾವತಾರ)

ಖಳಶಿರೋಮಣಿ ಕನಕಾಕ್ಷನೆಂಬಸುರ ನಿ -
ನ್ನೊಳು ಸೆಣಸುವೆನೆಂಬ ಗರುವದಿಂದಲಿ ಬಹು
ಬಲದಿಂದುದ್ಧಟನಾಗಿ ದಿವಿಜರನಂಜಿಸಿ
ಇಳೆಯ ಕದ್ದು ರಸಾತಳದೊಳಗಿರೆ ನಿನ್ನ
ಪೊಳೆವ ಕೋರೆಗಳಿಂದ ತಿವಿದು ರಕ್ಕಸನ ಅ -
ಪ್ಪಳಿಸಿ ಕೊಂದವನ ದಿಂಡುಗೆಡಹಿ ಮಹೀ -
ಲಲನೆಯೊಡನೆ ಕೈಕೊಂಡು - ಪಾಲಿಸಿದೆ ಪೂ -
ಮಳೆಗರೆದರು ಅಮರರು ನೆಲೆಗೊಂಡು ॥ ೩ ॥ (ವರಾಹಾವತಾರ)

ಹಗಲಿರುಳಳಿವಿಲ್ಲದಸುರ ಕಶಿಪು ತನ್ನ
ಮಗನ ಹರಿಯ ತೋರೆಂದಧಿಕ ಬಾಧಿಸುತಿರೆ
ಬಗಿದು ಕಂಬವನೊಡೆದಧಿಕ ರೋಷಾಗ್ನಿ ಕಾ -
ರ್ಬೊಗೆ ಸೂಸಿ ಗಗನಮಂಡಲ ಧಗ – ಧಗಧಗ
ಧಗಿಪ ಪ್ರಜ್ವಾಲೆಯನುಗುಳಿ ಹಿರಣ್ಯಕನ ಕೂ -
ರುಗುರಿಂದೊಡಲ ಸೀಳಿ ಕರುಳಮಾಲೆ
ತೆಗೆದು ಕಂಠದಲಿ ತಾಳಿ ಒಪ್ಪಿದೆ ನರ -
ಮೃಗರೂಪೀ ತ್ರಾಹಿಯೆನಲು ಶಶಿಮೌಳಿ ॥ ೪ ॥ (ನರಸಿಂಹಾವತಾರ)

ಕುಲಿಶಧರನ ಗೆದ್ದು ಕುವಲಯದೊಳು ಭುಜ -
ಬಲವಿಕ್ರಮದಲಿ ಸೌಭಾಗ್ಯದುನ್ನತಿಯಿಂದ
ಬಲಿ ವಾಜಿಮೇಧ ಗೆಯ್ಯಲು ವಟುವೇಷದಿಂ -
ದಿಳಿದು ತ್ರಿಪಾದ ಭೂಮಿಯ ದಾನವ ಬೇಡಿ
ಬಲುಹಮ್ಮ ಮುರಿಯಬೇಕೆಂದವನ ಶಿರಮೆಟ್ಟಿ
ನೆಲನ ಈರಡಿಮಾಡಿದೆ ಚರಣವಿಟ್ಟು

ಜಲಜಜಾಂಡವನೊಡೆದೆ ಅಂಗುಷ್ಟದಿ
ಸುಲಲಿತ ಸುಮನಸ ನದಿಯ ನೀ ಪಡೆದೆ ॥ ೫ ॥ (ವಾಮನವತಾರ)

ಪೊಡವಿಪತಿಗಳೊಳಗಧಿಕ ಕಾರ್ತವೀರ್ಯ
ಕಡುಧೀರ ದೇವ ದೈತ್ಯರಿಗಂಜದವನ ಬೆಂ -
ಬಿಡದೆ ಸಂಗ್ರಾಮದೊಳಧಿಕ ಸಮರ್ಥನ
ಹೊಡೆದು ತೋಳ್ಗಳ ಕುಟ್ಟಿ ಕೆಡಹಿ ಆಗಸದೊಳು
ಮೃಢಮುಖ್ಯ ದೇವಸಂತತಿ ನೋಡೆ ಕ್ಷತ್ರಿಯರ
ಪಡೆಯನೆಲ್ಲವ ಸವರಿ ಮಾತೆಯ ಶಿರ
ಕಡಿದು ತತ್ಪತಿಗೆ ತೋರಿ ಪಿಡಿದೆ ಗಂಡು -
ಗೊಡಲಿಯ ಕರದಿ ಬಲ್ಲಿದ ದನುಜಾರಿ ॥ ೬ ॥ (ಪರಶುರಾಮಾವತಾರ)

ದಶರಥರಾಯ ಕೌಸಲ್ಯಾನಂದನನಾಗಿ
ಋಷಿ ವಿಶ್ವಾಮಿತ್ರನಧ್ವರವ ರಕ್ಷಿಸಿ ಘನ
ವಿಷಕಂಠ ಧನುವ ಖಂಡಿಸಿ ಜಾನಕಿಯ ತಂದು
ತ್ರಿಶಿರ ದೂಷಣ ಖರರಳಿದು ವಾಲಿಯನಂದು
ನಿತಿ ಶಾಸ್ತ್ರದಿಂದ ಸಂಹರಿಸಿ ಸಾಗರವ ಬಂ -
ಧಿಸಿ ರಾವಣನ ಶಿರವ ಕತ್ತರಿಸಿ ರಂ -
ಜಿಸುವ ಲಂಕಾಪುರವ ವಿಭೀಷಣಗೆ
ಎಸೆವ ಪಟ್ಟವ ಕಟ್ಟಿದೆಲೆ ದೇವಗರುವ ॥ ೭ ॥ (ರಾಮಾವತಾರ)

ದೇವಕಿ ವಸುದೇವರಲ್ಲಿ ಜನಿಸಿ ಲೋಕ
ಪಾವನಗೆಯ್ದು ಪನ್ನಗನ ಪೆಡೆಯ ಮೆಟ್ಟಿ
ಗೋವಳನಾಗಿ ಗೋವರ್ಧನ ಗಿರಿಯೆತ್ತಿ
ಮಾವ ಮಲ್ಲರ ಕೊಂದು ಪಾರಿಜಾತವ ತಂದು
ಆ ವಿಪ್ರನಲಿ ಓದಿ ಪೋದಪತ್ಯವನಿತ್ತ
ತಾವರೆದಳಸುನೇತ್ರ ತ್ರಿಭುವನ ಸಂ -
ಜೀವ ಪರಮ ಪವಿತ್ರ ಶ್ರೀ ರುಕ್ಮಿಣಿ -
ದೇವಿ ಮನೋಹರ ಶುಭನೀಲಗಾತ್ರ ॥ ೮ ॥ (ಕೃಷ್ಣಾವತಾರ)

ಸರಸಿಜಾಸನ ಭವ ಇಂದ್ರಾದಿಗಳುಕದೆ
ದುರುಳ ದಾನವರಿರಲಂದು ಖೇಚರದೊಳು

ನಿರುಪಮ ನೀನೆ ಒಂದೊಂದು ರೂಪಗಳಿಂದ
ಹರಗೆ ಸಹಾಯವಾಗಿ ದನುಜ ಸ್ತ್ರೀಯರ ವ್ರತ
ಪರಿಹಾರ ಮಾಡಿ ಆಯಾಸವಿಲ್ಲದಲೆ ಮು -
ಪ್ಪುರವ ಅಳಿದ ನಿಸ್ಸೀಮ ಅಖಿಳಶ್ರುತಿ -
ಯರಸೆ ಕಾಣದ ಮಹಿಮ ಹೇ ಸಾಮಜ -
ವರದ ಸುಪರ್ಣವಾಹನ ಸಾರ್ವಭೌಮ ॥ ೯ ॥ (ಬೌದ್ಧಾವತಾರ)

ಮಣಿಮಯ ಯುಕ್ತ ಆಭರಣದಿಂದೆಸೆವ ಲ-
ಕ್ಷಣವುಳ್ಳ ದಿವ್ಯ ವಾಜಿಯನೇರಿ ಧುರದೊಳು
ಕುಣಿವ ಮೀಸೆಯ ಘೋರ ವದನ ಖಡ್ಗ ಚರ್ಮ -
ವನು ಕೊಂಡು ದ್ರುಹಿಣಾದಿಗಳು ಪೊಗಳಲು ಕಲಿ -
ದನುಜರೆಲ್ಲರನೊಂದೆ ದಿನದೊಳು ಸವರಿದ
ರಣಭಯಂಕರ ಪ್ರಚಂಡ-ಮೂಜಗದೊಳು
ಎಣೆಗಾಣಿನೆಲೊ ಉದ್ದಂಡ ಕಲ್ಕಿ ದಿನ
ಮಣಿ ಕೋಟಿ ತೇಜ ದುಷ್ಕೃತಕುಲ ಖಂಡ ॥ ೧೦ ॥ (ಕಲ್ಕ್ಯಾವತಾರ)

ಚಿತ್ತಜನಯ್ಯನೆ ಚಿನ್ಮಯಗಾತ್ರನೆ
ಉತ್ತಮ ದರ ಚಕ್ರ ಗದೆ ಜಲಜಾಂಕನೆ
ಸುತ್ತಲು ಅರಸಲು ನಿನಗೆಲ್ಲಿ ಸರಿಕಾಣೆ
ಹೊತ್ತು ಹೊತ್ತಿಗಾದಿತ್ಯರ ಬಿನ್ನಪ ಕೇಳಿ
ಹತ್ತವತಾರದಿ ಅಸುರರ ಮಡುಹಿದೆ
ನಿತ್ಯ ತ್ರಿಸ್ಥಾನವಾಸವಾಗಿಹ ಸರ್ವ
ಭಕ್ತರ ಮನೋವಿಲಾಸ ಸಲಹೋ ಪುರು
ಷೋತ್ತಮ ಪುರಂದರ ವಿಠಲ ತಿರುಮಲೇಶ ॥ ೧೧ ॥ (ಫಲಶೃತಿ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

** ಮೊದಲನೆ ನುಡಿಯಲ್ಲಿ, Ref. ೨ ಮತ್ತು Ref. ೩ ಯಲ್ಲಿ - "ಸೋಮಕನೆಂಬ ದನುಜ" ಎಂದು ಹೇಳಿದ್ದಾರೆ. Ref. ೧ ರಲ್ಲಿ "ತಮ ಎಂಬ ದೈತ್ಯನು" ಎಂದು ಹೇಳಿದ್ದಾರೆ.

**ಇವುಗಳ ವಿವರಣೆ ಹೀಗಿದೆ.**

ಮತ್ಸ್ಯರೂಪಿನಿಂದ ಧರಿಸಿದ ಭಗವಂತನು ಸೃಷ್ಟಿಯ ಆದಿಯಲ್ಲಿ ಬ್ರಹ್ಮದೇವನಿಂದ ವರ ಪಡೆದು, ವೇದಗಳನ್ನು ಅಪಹರಿಸಿದ ಹಯಗ್ರೀವಾಸುರನನ್ನು ಸಂಹರಿಸಿದ. ಅದೇ ಮತ್ಸ್ಯರೂಪಿ ಭಗವಂತನು ರುದ್ರ ದೇವರಿಂದ ಅವಧ್ಯ (ಸಾವಿಲ್ಲದವರು) ನೆಂದು ವರಪಡೆದ ಸೋಮಕ ಮತ್ತು ತಮ ಎಂಬ ದೈತ್ಯರನ್ನು ಸಂಹರಿಸಿದ. ಮತ್ತೊಮ್ಮೆ ಪ್ರಳಯ ಸಂಭವಿಸಲು ಸತ್ಯವ್ರತ ಮತ್ತು ಸಪ್ತಋಷಿಗಳನ್ನು ನಾವೆಯ ಮೂಲಕ ಸಂರಕ್ಷಿಸಿ ಮುಂದಿನ ಯುಗಕ್ಕೆ ಅನುವುಮಾಡಿಕೊಟ್ಟ. ಒಟ್ಟಾರೆಯಾಗಿ, ಇವರಿಬ್ಬರೂ, ಭಗವಂತನಿಂದ ಸಂಹರಿಸಲ್ಪಟ್ಟ, ಅಧರ್ಮ ಮತ್ತು ಅಜ್ಞಾನದ ಸಂಕೇತಗಳಾಗಿದ್ದಾರೆ.

ಇದರಲ್ಲಿ ದಶಾವತಾರದ ವಿಸ್ತಾರವಾದ ವರ್ಣನೆಯಿದೆ.

**ದನುಜ** = ರಾಕ್ಷಸ

**ಕಡುಹು** – ಸಾಹಸ.

**ಕುಲಿಶಧರ** – ಇಂದ್ರ.

**ಕುವಲಯ** – ಭೂಮಂಡಲ.

**ಸುಮನಸ ನದಿ** – ಗಂಗೆ.

**ಸಾಮಜ** – ಆನೆ.

೧. ಇದರಲ್ಲಿ ಮತ್ಸ್ಯಾವತಾರದ ಕಥೆಯನ್ನು ಹೇಳಿದೆ:

**ಶಕ್ರ** = ಇಂದ್ರ

**ಬಿಸಜಸಂಭವ** = ಬ್ರಹ್ಮ

**ನಿಗಮ** = ವೇದ

**ವಿಷ** = ನೀರು; **ವಿಷಧಿ** = ಜಲಧಿ.

೨. ಇದರಲ್ಲಿ ಕೂರ್ಮಾವತಾರದ ಕಥೆ ಬರುತ್ತದೆ.

**ನೇಣು** = ಹಗ್ಗ

**ಘನಾಚಲ** = ಮಂದರಾದ್ರಿ

೩. ಇದರಲ್ಲಿ ವರಹಾವತಾರದ ಕಥೆಯನ್ನು ಹೇಳಲಾಗಿದೆ.

**ದಿಂದುಗೆಡಹಿ** = ನೆಲಕ್ಕೆ ಕೆಡವಿ

**ಕನಕಾಕ್ಷ** = ಹಿರಣ್ಯಾಕ್ಷ

೪. ನರಸಿಂಹಾವತಾರದ ವರ್ಣನೆ ಇಲ್ಲಿದೆ.

**ನರಮೃಗ** = ನರಸಿಂಹ

೫. ವಾಮನಾವತಾರದ ಕಥೆಯನ್ನು ಇಲ್ಲಿ ಬಣ್ಣಿಸಲಾಗಿದೆ.

**ಕುಲಿಶ** = ವಜ್ರಾಯುಧ
**ಕುವಲಯ** = ಭೂಮಂಡಲ
**ವಾಜಿಮೇಧ** = ಅಶ್ವಮೇಧ"
**ಹಮ್ಮು** = ಅಹಂಕಾರ
**ಜಲಜಾಂಡ** = ಬ್ರಹ್ಮಾಂಡ
**ಸುಮನಸನದಿ** = ದೇವಗಂಗಾ

೬. ಪರಶುರಾಮಾವತಾರವನ್ನು ಇಲ್ಲಿ ಹೇಳಿದೆ:

**ಕಾರ್ತವೀರ್ಯ:—** ಈತನು ಮಾಹಿಷ್ಮತಿಯ (ಕೃತವೀರ್ಯನೆಂಬ) ರಾಜನ ಮಗನು. ಇವನು ಸಾವಿರ ತೋಳುಗಳ ಪರಾಕ್ರಮಿ; ರಾವಣನನ್ನು ಕೂಡ ಸೋಲಿಸಿದವನು. ಜಮದಗ್ನಿ ಋಷಿಗಳ ಆಶ್ರಮದಿಂದ ಇವನು ಕಾಮಧೇನುವನ್ನು ಒತ್ತಾಯದಿಂದ ತೆಗೆದುಕೊಂಡು ಹೋಗಲು, ಪರಶುರಾಮನು ಇವನನ್ನು ಸಂಹರಿಸಿದನು. (ಭಾರತ, ಸಭಾ. ೪೯)

**ಮಾತೆಯ ಶಿರವ ಕಡಿದು:—** ಇವನ ತಾಯಿ ರೇಣುಕೆ. ಪ್ರಸೇನಜಿತ ಎಂಬ ಅರಸನ ಮಗಳು; ಜಮದಗ್ನಿಯ ಹೆಂಡತಿ. ಇವಳು ಒಂದು ದಿನ ಗಂಗಾನದಿಗೆ ನೀರು ತರಲು ಹೋದಾಗ, ಅಲ್ಲಿ ಜಲಕ್ರೀಡೆಯಾಡುತ್ತಿದ್ದ ಚಿತ್ರರಥನೆಂಬ ಗಂಧರ್ವನನ್ನು ಕಂಡು, ಮನಸ್ಸು ವಿಚಲಿತಗೊಂಡು, ಯಜ್ಞ ಕಾಲ ತಪ್ಪಿ ಆಶ್ರಮಕ್ಕೆ ಮರಳಿದಳು. ಆಗ ಜಮದಗ್ನಿ ಋಷಿ ಇವಳ ಮನಃಸ್ಥಿತಿಯನ್ನು ಅರಿತು, 'ವ್ಯಭಚಾರಿಣಿ' ಎಂದು ನಿರ್ಣಯಿಸಿ, ಶಿರಚ್ಛೇದ ಶಿಕ್ಷೆಗೆ ಗುರಿಪಡಿಸಿದನು. ಪರಶುರಾಮನು ತಂದೆಯ ಅಪ್ಪಣೆಯಂತೆ ತಾಯಿಯ ಶಿರಸ್ಸನ್ನು ಕಡಿದನು. (ಭಾರತ, ವನ. ೧೧೬)

**ಗಂಡುಗೊಡಲಿ** = ಚಪ್ಪಗೊಡಲಿ

೭. ರಾಮಾವತಾರದ ಕಥೆ ಇದರಲ್ಲಿದೆ:

**ವಿಷಕಂಠ ಧನು = ಶಿವನ ಧನುಸ್ಸು:—**

ಇದನ್ನು ಪರಶುರಾಮನು ಜನಕರಾಜನಿಗೆ— ಸೀತೆಯ ಸಾಮರ್ಥ್ಯಕ್ಕೆ ಮೆಚ್ಚಿ ಕೊಟ್ಟಿದ್ದನು. ಅಲ್ಲದೆ ಇದನ್ನು ಹೆದೆಯೇರಿಸಿದವನಿಗೆ ಸೀತಾದೇವಿಯನ್ನು ಮದುವೆಮಾಡಿಕೊಡಬೇಕೆಂದು ಹೇಳಿದ್ದನು. ಅದರಂತೆ ಸ್ವಯಂವರ ಕಾಲದಲ್ಲಿ ಶ್ರೀರಾಮನು ಇದನ್ನು ಮುರಿದು ಸೀತಾದೇವಿಯನ್ನು ಮದುವೆಯಾದನು. (ಆನಂದರಾಮಾಯಣ)

**ದಶರಥ:—** ಸೂರ್ಯವಂಶದ ಇಕ್ಷ್ವಾಕುಕುಲದ ಅಜರಾಜನ ಮಗ. ಇವನು ಅಯೋಧ್ಯೆಯಲ್ಲಿ ಆಳುತ್ತಿದ್ದನು. ಇವನಿಗೆ ಕೌಸಲ್ಯಾ, ಸುಮಿತ್ರಾ," ಕೈಕೇಯಿ ಎಂಬ ಮೂವರು ಹೆಂಡಂದಿರು. ಪುತ್ರಕಾಮೇಷ್ಠಿಯನ್ನು ಮಾಡಿ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ಮಕ್ಕಳನ್ನು ಪಡೆದನು.
(ರಾಮಾಯಣ-ಬಾಲ: ೨-೧೮)

**ಕೌಸಲ್ಯಾ:—** ದಶರಥರಾಜನ ಹಿರಿಯ ಹೆಂಡತಿ. ಕೋಸಲ ದೇಶದ ಅಧಿಪತಿಯಾದ ಭಾನುಮಂತನ ಮಗಳು. ಇವಳ ಮಗನು ಶ್ರೀರಾಮಚಂದ್ರ.
(ರಾಮಾಯಣ-ಬಾಲಕಾಂಡ ೮)

**ತ್ರಿಶಿರ:—** ದೂಷಣನೆಂಬ ರಾಕ್ಷಸರಾಜನ ನಾಲ್ಕು ಮಂದಿ ಮಂತ್ರಿಗಳಲ್ಲಿ ಒಬ್ಬ. ಶೂರ್ಪಣಖೆಗಾದ ಅವಮಾನದ ಮುಯ್ಯನ್ನು ತೀರಿಸಲೆಂದು, ಶ್ರೀರಾಮನ ಮೇಲೆರಿ ಹೋಗಿ, ಅವನಿಂದ ಕೊಲ್ಲಲ್ಪಟ್ಟನು.

**ದೂಷಣ:—** ವಿಶ್ರವಸ ಋಷಿ ಮತ್ತು ರಾಕಾ ಎಂಬ ರಾಕ್ಷಸಿ ಇವರ ಮಗ. ಖರನೆಂಬ ರಾಕ್ಷಸನು ಇವನ ಅಣ್ಣ. ಖರನ ಸೇನಾಪತಿಯಾದ ಇವನು ರಾಮನ ಸಂಗಡ ಯುದ್ಧ ಮಾಡಿ ಮಡಿದನು.
(ಭಾರತ-ವನ ೨೯೭)

**ಖರ:—** ಇವನು ದೂಷಣನ ಅಣ್ಣ. ರಾವಣನ ಮಲತಮ್ಮ, ಶೂರ್ಪಣಖೆ ಇವನ ತಂಗಿ. ರಾಮನ ಸಂಗಡ ಯುದ್ಧ ಮಾಡಿ ತೀರಿದನು.
(ಭಾರತ-ವನ ೨೭೪)

**ಗರುವ** = ಉತ್ತಮ; ಶ್ರೇಷ್ಠ

೮. ಇಲ್ಲಿ ಕೃಷ್ಣಾವತಾರದ ಕಥೆಯಿದೆ:

**ಪನ್ನಗ** = ಕಾಳಿಯನೆಂಬ ಸರ್ಪ.

(ಗೋವರ್ಧನಗಿರಿ — ಮಧುರೆಯಿಂದ ಗೋವರ್ಧನವು ೧೭ ಮೈಲಿನ ಮೇಲಿದೆ. ಇದೋ ಪರ್ವತಪ್ರದೇಶ. ಇದರ ಉದ್ದಳತೆ ೭ ಮೈಲು ಇದ್ದರೂ ಎತ್ತರ ಮಾತ್ರ ತೀರ ಕಡಿಮೆ.)

**ಗೋವರ್ಧನ ಗಿರಿಯೆತ್ತಿ:—** ಗೊಲ್ಲರು ಇಂದ್ರಯಾಗ ಮಾಡಬೇಕೆಂದಿರುವಾಗ ಶ್ರೀಕೃಷ್ಣ ಆ ಯಾಗವನ್ನು ನಿಲ್ಲಿಸಿ, ಗೋವರ್ಧನಗಿರಿಯ ಪೂಜೆ ಮಾಡಲಿಕ್ಕೆ ಹೇಳಿದನು. ಇದರಿಂದ ಇಂದ್ರನು ಸಿಟ್ಟಾಗಿ ಅತಿವೃಷ್ಟಿಯನ್ನು "ಪ್ರಾರಂಭಿಸಿದಾಗ, ಶ್ರೀಕೃಷ್ಣನು ಗೋವರ್ಧನಗಿರಿಯನ್ನು ಎತ್ತಿ ಹಿಡಿದು ಗೊಲ್ಲರನ್ನೂ ಗೋವುಗಳನ್ನೂ ರಕ್ಷಿಸಿದನು. (ಭಾಗವತ ೧೦, ೨೪-೨೫)

**ಪಾರಿಜಾತ:—** ಇದು ಕ್ಷೀರಸಮುದ್ರದಲ್ಲಿ ಹುಟ್ಟಿದ ೧೪ ರತ್ನಗಳಲ್ಲಿ ಒಂದು. ಇಂದ್ರನು ಇದನ್ನು ಸುರಲೋಕಕ್ಕೆ ಒಯ್ದಿದ್ದನು. ಸತ್ಯಭಾಮೆಯ ಅಪೇಕ್ಷೆಯಂತೆ ಇದನ್ನು ಶ್ರೀಕೃಷ್ಣನು ಸ್ವರ್ಗದಿಂದ ಅಪಹರಿಸಿ ದ್ವಾರಕೆಗೆ ತೆಗೆದುಕೊಂಡು ಬಂದನು. (ಭಾಗವತ ೧೦-೫೯)

**ವಿಪ್ರ** = ಗುರುವಾದ ಸಾಂದೀಪನಿ
**ಪೋದಪತ್ಯವನಿತ** = (ಹಾಡು ೧೩. ನುಡಿ ೫)

೯. ಬೌದ್ಧಾವತಾರದ ಕಥೆ ಇಲ್ಲಿ ನಿರೂಪಿತವಾಗಿದೆ.

**ಖೇಚರ** = ಆಕಾಶಮಾರ್ಗ
**ಸಾಮಜವರದ** = ಕರಿರಾಜವರದ

೧೦. ಕಲ್ಕ್ಯಾವತಾರದ ಕಥೆಯನ್ನು ಇಲ್ಲಿ ಕಾಣಬಹುದು.

**ಚರ್ಮ** = ಢಾಲು, ಹರಿಗೆ
**ದ್ರುಹಿಣ** = ಬ್ರಹ್ಮ
**ಕಲಿದನುಜ** = ಕಲಿಯುಗದ ರಾಕ್ಷಸರು, ಕಲಿಪುರುಷ.
**ದಿನಮಣಿ** = ಸೂರ್ಯ

೧೧. **ಆದಿತ್ಯ** = ಅದಿತಿಯ ಮಕ್ಕಳು, ದೇವತೆಗಳು.
**ತ್ರಿಸ್ಥಾನ** = ಶ್ವೇತದ್ವೀಪ, ಅನಂತಾಸನ, ವೈಕುಂಠ.

**Classification:** Keerthane
**Ankita:** purandara vittala

**Location:** Tirupati

**Category:** Dashavatara, Pooja Tatva,

**Sub-Category:** deva, Vishnu, Narayana, ranga, daitya, asura, kalla, visha, bhumi, veda, brahma, karuna, keshava, daya, indra, dashavatara, garva, brahmana, hengasu, hennu, hoovu, hagalu, irulu, Bhagya, kudure, gange, nadi, kaadu, deva, akasha, tayi, Dasharatha, Vibhishana, lanka, ravana, Devaki, loka, parvata, padma, kannu, Rukmini, bhava, shiva, vrata, abharana, shruthi, chakra, srinivasa,

**Pravachana:** NA

**Explanation:** NA